

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 08-03-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಖೈಸ್ ಬಿನ್ ಮುಹ್‌ಸಿನ್ ಅನ್‌ಸಾರಿ(ರ) ಸಹಾಬಿಯಾಗಿದ್ದರು. ಅವರು ಬನೂ ಝುರೀಖ್ ಗೋತ್ರದವರಾಗಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಜುಬೈರ್ ಬಿನ್ ಅಯಾಝ್(ರ). ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದರು. ಅವರು ಖಝ್ರಜ್ ಗೋತ್ರದ ಬನೂ ಝುರೀಖ್ ಶಾಖೆಗೆ ಸೇರಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ (ನಊದುಬಿಲ್ಲಾಹ್) ಒಬ್ಬ ಯಹೂದಿ ಮಾಟ ಮಾಡಿದ ಕಾರಣ ಅದರ ಪ್ರಭಾವ ಅವರ ಮೇಲೆ ತಲೆದೋರಿತು ಎಂದು ಹದೀಸ್‌ಗಳಲ್ಲಿ ವರದಿಯಾಗಿದೆ. ಬಾಚಣಿಗೆ ಮತ್ತು ತಲೆಗೂದಲುಗಳನ್ನು ಬಳಸಿ ಮೋಡಿಮಾಟ ಮಾಡಿ ಒಂದು ಬಾವಿಗೆ ಅವುಗಳನ್ನು ಹಾಕಲಾಗಿತ್ತು ಎಂದೂ ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ವಸ್ತುಗಳನ್ನು ಬಾವಿಯಿಂದ ತೆಗೆಯಿಸಿದರೆಂದೂ ವರದಿಯಾಗಿದೆ. ಸಹೀಹ್ ಬುಖಾರಿಯ ವ್ಯಾಖ್ಯಾನ ಗ್ರಂಥವಾದ ಫತ್‌ಹುಲ್‌ಬಾರೀಯಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಜುಬೈರ್ ಬಿನ್ ಅಯಾಝ್ ಆ ಬಾಚಣಿಗೆ ಮತ್ತು ಕೂದಲನ್ನು ಬಾವಿಯಿಂದ ಹೊರಗೆ ತಂದರು. ಇನ್ನೊಂದು ವರದಿ ಪ್ರಕಾರ ಹಝ್ರತ್ ಖೈಸ್ ಬಿನ್ ಮುಹ್‌ಸಿನ್ ಆ ವಸ್ತುಗಳನ್ನು ತೆಗೆದು ಹಾಕಿದರು. ಆದುದರಿಂದ ಈ ಇಬ್ಬರು ಸಹಾಬರ ಬಗ್ಗೆ ನಾನು ಒಟ್ಟಿಗೆ ಪ್ರಸ್ತಾಪಿಸಿರುವೆನು. ಆದರೆ ಆ ವಸ್ತುಗಳನ್ನು ಬಾವಿಯಿಂದ ಹೊರಗೆ ಹಾಕಿದವರು ಯಾರು ಎಂಬ ವಿಷಯ ಅಷ್ಟೇನೂ ಮಹತ್ವಪೂರ್ಣವಾದುದಲ್ಲ. ಮುಖ್ಯ ವಿಷಯವೆಂದರೆ, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಮೋಡಿ ಮಾಟದ ಪ್ರಭಾವ ಉಂಟಾಯಿತೇ? ಎಂಬುದು. ಇದರ ವಾಸ್ತವಿಕತೆ ಏನು. ಇದರ ಬಗ್ಗೆ ನಮ್ಮ ಅಭಿಪ್ರಾಯ ಏನು? ಇವುಗಳು ನಾವು ಮನವರಿಕೆ ಮಾಡಬೇಕಾದ ವಿಷಯಗಳಾಗಿವೆ.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರೋಗ ಬಾಧಿತರಾದುದು ಮತ್ತು ಅವರ ಮೇಲೆ ಯಹೂದಿಯರು ಮೋಡಿ ಮಾಟ ಮಾಡಿರುವರೆಂದು ಜನರು ಭಾವಿಸಿದುದು ಇದಕ್ಕೆ ಸಂಬಂಧಿಸಿ ಒಂದು ಹದೀಸು ಹೀಗಿದೆ: ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ವರದಿ ಮಾಡುತ್ತಾರೆ: ಯಹೂದಿಯರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಮೋಡಿ ಮಾಟ ಮಾಡಿದರು. ಅದರ ಪ್ರಭಾವದಿಂದ ಅವರು ಕೆಲವು ಸಾರಿ ತಾನು ಈ ಕೆಲಸ ಮಾಡಿದೆ ಎಂದು ಭಾವಿಸುತ್ತಿದ್ದರು. ಆದರೆ ವಾಸ್ತವಿಕವಾಗಿ ಆ ಕೆಲಸವನ್ನು ಅವರು ಮಾಡಿರಲಿಲ್ಲ. ಒಂದು ದಿನ ಹಗಲು ಅಥವಾ ರಾತ್ರಿ ವೇಳೆಯಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನೊಂದಿಗೆ ಪ್ರಾರ್ಥಿಸಿದ ನಂತರ ಹೇಳಿದರು: ಆಯಿಶಾ, ಅಲ್ಲಾಹನೊಂದಿಗೆ ನಾನು ಬೇಡಿಕೊಂಡದ್ದೆಲ್ಲವನ್ನೂ ಅಲ್ಲಾಹನು ನನಗೆ ನೀಡಿದನು. ಆಗ ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಹೇಳಿದರು: ಅಲ್ಲಾಹನ ರಸೂಲರೇ ತಾವು ಅಲ್ಲಾಹನಿಂದ ಬೇಡಿಕೊಂಡದ್ದು ಏನು? ಆಗ ಅವರು ಹೇಳಿದರು: ನನ್ನ ಸಮೀಪಕ್ಕೆ ಇಬ್ಬರು ಬಂದರು. ಒಬ್ಬ ನನ್ನ ತಲೆಯ ಬಳಿ ಮತ್ತು ಇನ್ನೊಬ್ಬ ನನ್ನ ಪಾದದ ಬಳಿ ಕುಳಿತರು. ನನ್ನ ತಲೆಯ ಸಮೀಪ ಕುಳಿತ ವ್ಯಕ್ತಿ ನನ್ನ ಪಾದದ ಸಮೀಪ ಕುಳಿತ ವ್ಯಕ್ತಿಯೊಂದಿಗೆ ಕೇಳಿದರು: ಇವರಿಗೆ, ಅಂದರೆ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಂಭವಿಸಿರುವ ಕಷ್ಟವಾದರೂ ಏನು? ಆಗ ಇನ್ನೊಬ್ಬ ಹೇಳಿದರು: ಅವರಿಗೆ ಮೋಡಿ ಮಾಟ ಮಾಡಲಾಗಿದೆ. ಆಗ ಮೊದಲನೆಯವನು ಕೇಳಿದ: ಯಾರು ಮೋಡಿ ಮಾಟ ಮಾಡಿದರು? ಆಗ ಇನ್ನೊಬ್ಬ ಉತ್ತರ ಹೇಳಿದ, ಲಬೀದ್ ಬಿನ್ ಆಸಿಮ್ ಎಂಬ ಯಹೂದಿ. ಮೊದಲನೆಯವನು ಕೇಳಿದ: ಯಾವುದರ ಮೂಲಕ ಮೋಡಿ ಮಾಟ ಮಾಡಲಾಗಿದೆ. ಬಾಚಣಿಗೆ ಮತ್ತು ತಲೆಗೂದಲನ್ನು ಖರ್ಜೂರದ ತೆನೆಯೊಳಗೆ ಇರಿಸಲಾಗಿದೆ. ಮೊದಲನೆಯವನು ಕೇಳಿದ ಅವುಗಳು ಎಲ್ಲಿವೆ. ಎರಡನೆಯವನು ಹೇಳಿದ: ಅವುಗಳು ಝೀಅರ್‌ವಾನ್‌ನ ಬಾವಿಯೊಳಗಿದೆ.

ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಹಾಬರೊಂದಿಗೆ ಆ ಬಾವಿಯ ಸಮೀಪಕ್ಕೆ ಹೋದರು. ಅಲ್ಲಿಂದ ಮರಳಿ ಬಂದು ಹೇಳಿದರು: ಆಯಿಶಾ, ಅಲ್ಲಾಹನಾಣೆ ಆ ಬಾವಿಯ ನೀರು ಮೆಹಂದಿ ಸತ್ವದ ಹಾಗೆ ಕೆಂಪಾಗಿತ್ತು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಯಹೂದಿಯರು ಮೋಡಿ ಮಾಟ ಮಾಡುವಾಗ ಮೆಹಂದಿ ಅಥವಾ ಬೇರೆ ಬಣ್ಣದ ಪದಾರ್ಥ ನೀರಿಗೆ ಹಾಕುತ್ತಿದ್ದರು. ಮೋಡಿ ಮಾಟದ ಕಾರಣದಿಂದ ನೀರು ಕೆಂಪಾಗಿದೆ ಎಂದು ತೋರಿಸಲು ಹೀಗೆ ಮಾಡುತ್ತಿದ್ದರು. ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಹೇಳುತ್ತಾರೆ: ನಾನು ಕೇಳಿದೆ, ಅಲ್ಲಾಹನ ರಸೂಲರೇ, ಯಾವ ವಸ್ತುಗಳ ಮೂಲಕ ಮೋಡಿ ಮಾಟ ಮಾಡಲಾಯಿತೋ ಅವುಗಳನ್ನು ತಾವು ಏಕೆ ಸುಟ್ಟು ಹಾಕಲಿಲ್ಲ. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಲ್ಲಾಹನು ನನಗೆ ರೋಗಶಮನ ದಯಪಾಲಿಸಿದನು. ಆದುದರಿಂದ ನಾನು ಯಾವುದಾದರೂ ಕೆಡುಕುಂಟಾಗುವ ಕೆಲಸ ಮಾಡಲು ಇಚ್ಛಿಸಲಿಲ್ಲ. ಆದುದರಿಂದ ಆ ವಸ್ತುಗಳನ್ನು ಹೂತು ಹಾಕಲು ನಾನು ಆಜ್ಞಾಪಿಸಿದೆ. ಆ ವಸ್ತುಗಳನ್ನು ಹೂತು ಹಾಕಲಾಯಿತು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಈ ಘಟನೆಯಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಯಹೂದಿಯರಿಗಿದ್ದ ಹಗೆತನದ ಕುರಿತು ತಿಳಿಯುತ್ತದೆ. ಅದರೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನ ಸತ್ಯಸಂಧರಾದ ಸಂದೇಶವಾಹಕರೆಂದು ಸಹ ಸಾಬೀತಾಗುತ್ತದೆ. ಏಕೆಂದರೆ ಯಹೂದಿಯರು ಅವರ ವಿರುದ್ಧ ಮಾಡುತ್ತಿದ್ದ ಕೆಲಸಗಳ ಬಗ್ಗೆ ಅಲ್ಲಾಹನು ಅವರಿಗೆ ತಿಳಿಸಿದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅದೃಶ್ಯ ವಿಷಯಗಳು ತಿಳಿದುದು ಮತ್ತು ಯಹೂದಿಯರು ತಮ್ಮ ಉದ್ದೇಶವನ್ನು ಈಡೇರಿಸುವುದರಲ್ಲಿ ಸೋಲನ್ನು ಅನುಭವಿಸಿದುದು ಅವರು ಸತ್ಯಸಂಧರಾದ ಸಂದೇಶವಾಹಕರೆಂಬುದಕ್ಕೆ ಸ್ಪಷ್ಟವಾದ ಸಾಕ್ಷ್ಯಾಧಾರವಾಗಿದೆ. ಈ ವಿಷಯದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ನಿಷ್ಕರ್ಷೆ ವಾಸ್ತವಿಕವಾದುದಾಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಯಹೂದಿಯರು ಮಾಡಿದ ಮೋಡಿ ಮಾಟದ ಯಾವ ಪ್ರಭಾವವೂ ಅವರ ಮೇಲೆ ಉಂಟಾಗಲಿಲ್ಲ. ಅವರಿಗೆ ಮರೆತು ಬಿಡುವ ಕಾಯಿಲೆ ಮಾತ್ರವಿತ್ತು. ಅಲ್ಲಾಹನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಯಹೂದಿಯರ ಕೆಲಸದ ಬಗ್ಗೆ ತಿಳಿಸಿದನು. ಯಹೂದಿಯರು ಮೋಡಿ ಮಾಟ ಮಾಡಿದರೆಂಬ ಯೋಚನೆಯನ್ನು ಸಹ ಬಾಹ್ಯರೂಪದಲ್ಲಿ ಸಹ ಪರಾಜಯಗೊಳಿಸುವಂತೆ ಮಾಡಿದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಯಿಲೆಯನ್ನು ನೋಡಿ ಯಹೂದಿಯರು ತಮ್ಮ ಯೋಚನೆ ಪ್ರಕಾರ ಸಂತೋಷ ಭರಿತರಾಗಿದ್ದರು. ಅಥವಾ ಅವರು ಪ್ರಕಟಿಸಿದ್ದರು – ತಮ್ಮ ಮೋಡಿ ಮಾಟದ ಪ್ರಭಾವದಿಂದ ಅವರು ರೋಗಿಯಾದರೆಂದು. ಆದರೆ ಅದರ ವಾಸ್ತವಿಕತೆ ಬಹಿರಂಗ ಗೊಂಡಿತು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹುದೈಬಿಯಾ ಸಂಧಿಯ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಒಮ್ಮೆ ಒಬ್ಬ ಯಹೂದಿ ವಂಶದ ಕಪಟ ವಿಶ್ವಾಸಿಯಾದ ಲಬೀದ್ ಬಿನ್ ಆಸಿಮ್ ಮೋಡಿ ಮಾಟ ಮಾಡಿದ್ದನು (ನಊದುಃಬಿಲ್ಲಾಹ್). ಒಂದು ಬಾಚಣಿಗೆಗೆ ತಲೆಗೂದಲುಗಳ ಗಂಟು ಹಾಕಿ ಅದರ ಮೇಲೆ ಏನೋ ಊದಿ ಅದನ್ನು ಬಾವಿಯಲ್ಲಿ ಅಡಗಿಸಿಡಲಾಯಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ (ನಊದುಃಬಿಲ್ಲಾಹ್) ಈ ಮೋಡಿ ಮಾಟದಿಂದ ಸಾಕಷ್ಟು ಕಾಲ ಪ್ರಭಾವಿತರಾದರೆಂದು ಹೇಳಲಾಗುತ್ತಿದೆ. ಅವರು ಆ ಸಮಯದಲ್ಲಿ ಬಹಳ ವಿಷಯಗಳನ್ನು ಮರೆತು ಬಿಡುತ್ತಿದ್ದರು. ಕೆಲವು ಸಾರಿ ನಾನೊಂದು ಕೆಲಸ ಮಾಡಿದೆ ಎಂದು ಯೋಚಿಸಿದಾಗ ಆ ಕೆಲಸ ಅವರು ಮಾಡಿರುವುದಿಲ್ಲ. ಕೆಲವು ಸಾರಿ ನಾನು ಈ ಪತ್ನಿಯ ಮನೆಗೆ ಹೋದ ನಂತರ ಮರಳಿ ಬಂದಿರುವೆ ಎಂದು ಯೋಚಿಸುವಾಗ ವಾಸ್ತವಿಕವಾಗಿ ಆ ಪತ್ನಿಯ ಮನೆಗೆ ಹೋಗಿರಲಿಲ್ಲ. ಅಂತೂ ಕೊನೆಗೆ ಅಲ್ಲಾಹನು ಒಂದು ಸ್ವಪ್ನದ ಮೂಲಕ ಆ ಪಿತೂರಿಯ ವಾಸ್ತವಿಕತೆ ತಿಳಿಸಿದನು. ಈ ವರದಿಯ ಸುತ್ತುಮುತ್ತಲೂ ಎಂತಹ ಕಥೆಗಳ ಬಲೆಯನ್ನು ಹೆಣೆಯಲಾಗಿದೆ ಎಂದರೆ ವಾಸ್ತವಿಕವಾಗಿ ಏನು ಸಂಭವಿಸಿತು ಎಂದು ತಿಳಿಯುವುದು ಕಷ್ಟಕರವಾಗಿದೆ. ಈ ಎಲ್ಲಾ ವರದಿಗಳನ್ನು ನಂಬುವುದಾದರೆ (ನಊದುಃಬಿಲ್ಲಾಹ್) ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಭರಿತ ಪರಿಶುದ್ಧ ವ್ಯಕ್ತಿತ್ವದ ಬಗ್ಗೆ ಅವರು ಬಹಳ ಬಲಹೀನ ವ್ಯಕ್ತಿ ಎಂದು ಹೇಳಬೇಕಾಗುತ್ತದೆ. ಕನಿಷ್ಟ ಲೌಕಿಕ ವಿಷಯಗಳಿಗೆ ಸಂಬಂಧಿಸಿಯಾದರೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ತಮ್ಮ ಮೋಡಿ ಮಾಟದ ಹಿಡಿತಕ್ಕೆ ಸಿಲುಕಿಸುವುದರಲ್ಲಿ ಅವರ ದುಷ್ಟ ಶತ್ರುಗಳು ಜಯಶಾಲಿಗಳಾದರೆಂದೂ ಅವರನ್ನು ತಮ್ಮ ಕೊಳಕು ಶ್ರದ್ಧೆಯ ಕೇಂದ್ರೀಕರಣಕ್ಕೆ ಪಾತ್ರರನ್ನಾಗಿಸಿ ಅವರ ಹೃದಯ ಮತ್ತು ಬುದ್ಧಿಯ ಮೇಲೆ ತಮ್ಮ ಪ್ರಭಾವ ಜಮಾಯಿಸಲು ಸಮರ್ಥರಾದರೆಂದೂ (ನಊದುಃಬಿಲ್ಲಾಹ್), ಅವರು ಈ ಮೋಡಿ ಮಾಟದ ಎದುರು ನಿಸ್ಸಹಾಯರಾಗಿದ್ದರು ಎಂದೂ ಹೇಳಬೇಕಾಗುತ್ತದೆ (ನಊದುಃಬಿಲ್ಲಾಹ್). ಈ ವರದಿಗಳ ಬಗ್ಗೆ ವೈಚಾರಿಕವಾಗಿ ಮತ್ತು ವಸ್ತುನಿಷ್ಠವಾಗಿ ಪರಿಶೋಧಿಸುವುದಾದರೆ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಅದು ಕೇವಲ ಆ ಸಂದರ್ಭದ ಚಿಂತೆಗಳಿಂದ ಮತ್ತು ಶಾರೀರಿಕ ಬಲಹೀನತೆಯಿಂದ ಉಂಟಾದ ರೋಗಬಾಧೆಯಿಂದ ಇದು ಸಂಭವಿಸಿದುದಾಗಿದೆ. ಕೆಲವು ದುರುದ್ದೇಶ ಹೊಂದಿದ ಶತ್ರುಗಳು ಅವರ ಆಗಿನ ಪರಿಸ್ಥಿತಿಯನ್ನು ನೋಡಿ ಹೀಗೆ ಪ್ರಚಾರ ಮಾಡಿದರು. ನಾವು ಮುಸ್ಲಿಮರ ಪ್ರವಾದಿಯ ಮೇಲೆ ಮೋಡಿ ಮಾಟ ಮಾಡಿರುವೆವು ಎಂದು. ಆದರೆ ಅಲ್ಲಾಹನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಬಹಳ ಬೇಗನೆ ಆರೋಗ್ಯ ನೀಡಿ ಶತ್ರುಗಳ ಮುಖ ಚಹರೆಗಳನ್ನು ಕಪ್ಪಗೆ ಮಾಡಿದನು. ಕಪಟವಿಶ್ವಾಸಿಗಳ ಸುಳ್ಳು ಪ್ರಚಾರವನ್ನು ಮಣ್ಣುಗೂಡಿಸಿದನು.

ಲೋಕದಾದ್ಯಂತವಿರುವ ಶೈತಾನಿ ಶಕ್ತಿಗಳನ್ನು ಜಯಿಸಿದ ಅತ್ಯಂತ ಶ್ರೇಷ್ಠ ಜಯಶಾಲಿ, ಅಫ್ಝಲುಲ್ ರುಸುಲ್ (ಸಂದೇಶವಾಹಕರಲ್ಲಿ ಅತ್ಯಂತ ಶ್ರೇಷ್ಠ), ಅವರಿಗಿಂತ ಮಿಗಿಲಾದ ರೀತಿಯಲ್ಲಿ ಶೈತಾನೀ ಶಕ್ತಿಗಳ ತಲೆಯನ್ನು ತುಳಿದು ಹಾಕುವ ಬೇರೆ ಯಾರೂ ಇಂದಿನ ತನಕ ಹುಟ್ಟಿಲ್ಲ. ಮುಂದೆ ಹುಟ್ಟಲಿಕ್ಕೂ ಇಲ್ಲ. ಅಂತಹ ಮಹಾನುಭಾವರ ಬಗ್ಗೆ ಒಬ್ಬ ನೀಚ ಯಹೂದಿಯ ಶೈತಾನಿ ಮೋಡಿ ಮಾಟಕ್ಕೆ ಅವರು ಅಧೀನರಾದರೆಂದು ಹೇಳುವುದು ಮನುಷ್ಯನ ಬುದ್ಧಿಯ ಅತ್ಯಂತ ಕೆಟ್ಟ ಬಳಕೆಯಾಗಿದೆ. ಹಾಗೆ ಊಹಿಸಲು ಸಹ ಸಾಧ್ಯವಿಲ್ಲ. ಇದು ಕೇವಲ ನಮ್ಮ ವಾದ ಮಾತ್ರವಲ್ಲ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ಇಂತಹ ಯೋಚನೆಯನ್ನು ಖಂಡಿಸಿದ್ದಾರೆ. ಒಂದು ಹದೀಸು ಮೂಲಕ ಇದರ ವಿಶದೀಕರಣ ಲಭಿಸುತ್ತದೆ. ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಒಮ್ಮೆ ಕೇಳಿದರು: ಅಲ್ಲಾಹನ ರಸೂಲರೇ, ನನ್ನ ಜೊತೆಗೆ ಶೈತಾನ್ ಇದ್ದಾನೆಯೇ? ಅವರು ಹೇಳಿದರು: ಹೌದು, ಇದ್ದಾನೆ. ಹಝ್ರತ್ ಆಯಿಶ(ರ) ಕೇಳಿದರು: ಪ್ರತಿಯೊಬ್ಬ ಮನುಷ್ಯನ ಜೊತೆ ಶೈತಾನ್ ಇದ್ದಾನೆಯೇ? ಅವರು ಹೇಳಿದರು: ಹೌದು, ಇದ್ದಾನೆ. ಹಝ್ರತ್ ಆಯಿಶ(ರ) ಆಶ್ಚರ್ಯಗೊಂಡು

ಕೇಳಿದರು: ಅಲ್ಲಾಹನ ರಸೂಲರೇ, ತಮ್ಮ ಜೊತೆ ಸಹ ಶೈತಾನ್ ಇದ್ದಾನೆಯೇ? ಅವರು ಹೇಳಿದರು: ಹೌದು, ನನ್ನ ಜೊತೆ ಸಹ ಶೈತಾನ್ ಇದ್ದಾನೆ. ಆದರೆ ಅಲ್ಲಾಹನು ನನಗೆ ಶೈತಾನನ ಮೇಲೆ ಜಯ ನೀಡಿದ್ದಾನೆ. ನನ್ನ ಶೈತಾನ್ ಸಹ ಮುಸ್ಲಿಮನಾಗಿ ಬಿಟ್ಟಿದ್ದಾನೆ.

ಇಂತಹ ಸ್ಪಷ್ಟ ಹೇಳಿಕೆ ಇರುವಾಗ ಒಬ್ಬ ಯಹೂದಿ ಕಪಟಿ, ಪವಿತ್ರ ಖುರ್‌ಆನ್ ಪ್ರಕಾರ ಮಗ್‌ಝೂಬಿ ಅಲೈಹಿಮ್ ಜನಾಂಗಕ್ಕೆ ಸೇರಿದವನು, ಶೈತಾನನ ಸಹಾಯದಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಂತಹ ಉನ್ನತ ಪದವಿಯ ಪ್ರವಾದಿಯ ಮೇಲೆ ಮೋಡಿ ಮಾಟ ಮಾಡಿರುವುದು ಸಾಧ್ಯವೇ? ಅವರು ಈ ಮೋಡಿ ಮಾಟಕ್ಕೆ ಒಳಗಾಗಿ ಧೀರ್ಘಕಾಲ ಆತಂಕಭರಿತರೂ ದುಃಖಿತರೂ ಆಗಿರಲು ಸಾಧ್ಯವೇ? ಇದಕ್ಕೆ ಸಂಬಂಧಿಸಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ: ಹಾಗಾದರೆ ಈ ಘಟನೆಯ ವಾಸ್ತವಿಕತೆ ಏನು ಎಂಬ ಪ್ರಶ್ನೆ ತಲೆದೋರುತ್ತದೆ. ಸಹೀಹ್ ಬುಖಾರಿಯಲ್ಲಿ ಸಹ ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾರಿಂದ ಸಹ ವರದಿಯಾಗಿರುವ ಈ ಸಂಭವದ ವಾಸ್ತವಿಕ ರೂಪ ಏನು? ಆ ಸಂದರ್ಭದ ಬಗ್ಗೆ ಮತ್ತು ಯಹೂದಿಗಳ ಹಾಗು ಕಪಟ ವಿಶ್ವಾಸಿಗಳ ನಡೆವಳಿಕೆಗಳನ್ನು ಪರಿಶೋಧಿಸಿದರೆ ಈ ಘಟನೆಯ ನಿಜಸ್ಥಿತಿಯನ್ನು ಅರಿತುಕೊಳ್ಳಲು ಹೆಚ್ಚು ಕಷ್ಟಕರವಾಗಲಾರದು. ಈ ಮೋಡಿ ಮಾಟಕ್ಕೆ ಸಂಬಂಧಿಸಿದ ಈ ಘಟನೆ ಹುದೈಬಿಯಾ ಸಂಧಿಯ ನಂತರದ ಕಾಲದ್ದಾಗಿದೆ ಎಂಬುದು ನೆನಪಿಟ್ಟುಕೊಳ್ಳಬೇಕಾದ ಆಂಶವಾಗಿದೆ. ಖುರೈಶಿಗಳು ತಡೆದುದರಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಉದ್ದೇಶ ಈಡೇರಿಸದೆ ಮರಳಿ ಬರಬೇಕಾಯಿತು. ಬಾಹ್ಯವಾದ ಈ ಸೋಲು ಎಂತಹ ದುಃಖಕರವಾದ ಸಂಭವವಾಗಿತ್ತೆಂದರೆ ಅವಿಶ್ವಾಸಿಗಳು ಮತ್ತು ಕಪಟ ವಿಶ್ವಾಸಿಗಳು ಅಪಹಾಸ್ಯ ಮಾಡಲು, ಲೇವಡಿ ಮಾಡಲು ಅದನ್ನು ಬಳಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆರೋಗ್ಯದ ಮೇಲೆ ಸಹ ಅದು ಬಹಳ ಪ್ರಭಾವ ಬೀರಿತು. ಅವರು ಸ್ವಲ್ಪ ಕಾಲ ಬಹಳ ಚಿಂತಾಮಗ್ನರಾಗಿದ್ದರು. ಈ ಕಾರಣದಿಂದ ಅವರ ಶಾರೀರಿಕ ಶಕ್ತಿಗಳ ಮೇಲೆ ಮತ್ತು ನೆನಪಿನ ಶಕ್ತಿಯ ಮೇಲೆ ಧಾರಾಳ ಪ್ರಭಾವ ಬೀರುವಂತಾಯಿತು. ಅವರು ಸ್ವಲ್ಪ ಕಾಲ ಮರೆವು ರೋಗಕ್ಕೆ ತುತ್ತಾದರು. ಯಹೂದಿಯರು ಮತ್ತು ಕಪಟ ವಿಶ್ವಾಸಿಗಳು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರೋಗ ಬಾಧಿತರಾಗಿರುವುದಾಗಿ ಕಂಡಾಗ ಅವರು ತಮ್ಮ ಹಿಂದಿನ ಅಭ್ಯಾಸ ಪ್ರಕಾರ ಅಪಪ್ರಚಾರ ಮಾಡಲು ತೊಡಗಿದರು– (ನಊದುಬಿಲ್ಲಾಹ್) ನಾವು ಮುಸ್ಲಿಮರ ಪ್ರವಾದಿಯ ವಿರುದ್ಧ ಮೋಡಿ ಮಾಟ ಮಾಡಿರುವೆವು ಎಂದು. ಅವರ ಮರೆವು ರೋಗ ಈ ಮೋಡಿ ಮಾಟದ ಪರಿಣಾಮ ಎಂದು ಹೇಳತೊಡಗಿದರು. ಅವರು ತಮ್ಮ ಪುರಾತನ ಕ್ರಮದ ಪ್ರಕಾರ ಮೋಡಿ ಮಾಟದ ಬಾಹ್ಯ ಚಿಹ್ನೆಗಳನ್ನು ಬಾವಿಗೆ ಹಾಕಿದರು. ಬಾಚಣಿಗೆಯೂ ತಲೆಗೂದಲುಗಳ ಗಂಟು ಮೊದಲಾದುವುಗಳನ್ನು ಮಾಡಿ ಬಾವಿಗೆ ಹಾಕಿದರು.

ಈ ತಥಾಕಥಿತ ಮೋಡಿ ಮಾಟದ ಸಮಾಚಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಲುಪಿದಾಗ ಅವರು ಈ ಪಿತೂರಿಯ ನಾಶಕ್ಕೋಸ್ಕರ ಅಲ್ಲಾಹನೊಂದಿಗೆ ಪ್ರಾರ್ಥಿಸಿದರು. ಅಲ್ಲಾಹನು ಅವರ ಈ ನೋವುಭರಿತ ಪ್ರಾರ್ಥನೆಯನ್ನು ಆಲಿಸಿದನು ಮತ್ತು ಒಂದು ಕನಸಿನ ಮೂಲಕ ಅದರ ನಿಜಸ್ಥಿತಿಯನ್ನು ಅವರಿಗೆ ತಿಳಿಸಿಕೊಟ್ಟನು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ: **ವಲಾ ಯುಫ್‌ಲಿಹಸ್ಸಾಹಿರು ಹೈಸು ಅತಾ** ಪ್ರವಾದಿಗಳ ಎದುರಿಗೆ ಯಾವುದೇ ಮೋಡಿ ಮಾಟಗಾರ ಜಯಶಾಲಿಯಾಗಲಾರನು ಎಂದು. **ಯಖೂಲು ಝ್ಝಾಲಿಮೂನ ಇನ್ ತತ್ತಬಿಊನ ಇಲ್ಲಾ ರಜುಲನ್ ಮಸ್‌ಹೂರ** – ಅವರು ಹೇಳುತ್ತಾರೆ, ನೀವು ಅನುಸರಿಸುವ ವ್ಯಕ್ತಿ ಮಾಟಕ್ಕೊಳಗಾದವನು.(17:48).

ಈ ಘಟನೆಯ ಕುರಿತು ಪ್ರಸ್ತಾಪಿಸುವ ಹದೀಸಿನ ಶಬ್ದಗಳು ಮತ್ತು ಅದರ ಶೈಲಿಯ ಬಗ್ಗೆ ನೋಡುವಾಗ ಮತ್ತು ಚಿಂತಿಸುವಾಗ ಈ ಹದೀಸು ''ಹಿಕಾಯತ್ ಅನಿಲ್ ಗೈರ್'' ವರ್ಗಕ್ಕೆ ಸೇರುತ್ತದೆಂದು ತೋರುತ್ತದೆ. ಹಿಕಾಯತ್ ಅನಿಲ್ ಗೈರ್ ಎಂದರೆ ಮಾತನಾಡುವವನು ಸ್ವತಃ ತಾನು ಸ್ವಂತ ಅನುಭವದಿಂದ ಮಾತನಾಡುತ್ತಾನೆಂದು ತೋರುತ್ತದೆ. ಆದರೆ ವಾಸ್ತವಿಕವಾಗಿ ಅನ್ಯನು ಹೇಳಿದುದನ್ನು ಪ್ರಸ್ತಾಪಿಸಲಾಗುತ್ತಿದೆ. ಹದೀಸು ವರದಿಯ ನೈಜ ಭಾಷಾಂತರ ಹೀಗೆ ಆಗುತ್ತದೆ: ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಒಮ್ಮೆ ಶತ್ರುಗಳು ಪ್ರಚಾರ ಮಾಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮೋಡಿ ಮಾಟ ಮಾಡಲಾಯಿತು ಎಂದು. ಆ ಕಾಲದಲ್ಲಿ ಅವರು ಕೆಲವು ಸಾರಿ ಹೀಗೆ ಯೋಚಿಸುತ್ತಿದ್ದರು ನಾನು ಆ ಕೆಲಸ ಮಾಡಿದೆ ಎಂದು. ಆದರೆ ವಾಸ್ತವಿಕವಾಗಿ ಆ ಕೆಲಸ ಮಾಡಿರಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನಲ್ಲಿ ಪ್ರಾರ್ಥಿಸಿದರು. ಅವರಿಗೆ ಸ್ವಪ್ನದಲ್ಲಿ ತೋರಿಸಲಾಯಿತು – ಇಬ್ಬರು ಅವರ ಕಷ್ಟದ ಬಗ್ಗೆ ಮಾತನಾಡುತ್ತಿದ್ದಾರೆ. ಈ ಸ್ವಪ್ನದಿಂದ ಅವರಿಗೆ ತಿಳಿಯಿತು ಒಬ್ಬ ಯಹೂದಿ ಅವರಿಗೆ ಮೋಡಿ ಮಾಟ ಮಾಡಲು ಕೆಲವು ವಸ್ತುಗಳನ್ನು ಅವನ ಕಲ್ಪನೆ ಪ್ರಕಾರ ಬಾವಿಗೆ ಹಾಕಿದ್ದಾನೆಂದು. ಅವರು ಬಾವಿಯ ಬಳಿಗೆ ತನ್ನ ಸಹಾಬರೊಂದಿಗೆ ಹೋಗಿ ಅದನ್ನು ಮುಚ್ಚಿ ಬಿಟ್ಟರು. ಹಝ್ರತ್ ಆಯಿಶ(ರ) ಕೇಳಿದರು ನೀವು ಆ ವಸ್ತುಗಳನ್ನು ಹೊರಗೆ ಎಸೆಯಲಿಲ್ಲವೇಕೆ. ಪ್ರವಾದಿವರ್ಯರು ಹೇಳಿದರು: ಅಲ್ಲಾಹನು ನನಗೆ ರೋಗೋಪಶಮನ ನೀಡಿದನು. ಹಾಗಿರುವಾಗ ನಾನು ಆ ವಸ್ತುಗಳನ್ನು ಹೊರಗೆಸೆದು ಜನರು ಅದರ ಬಗ್ಗೆ ಚರ್ಚಿಸುವಂತೆ ಏಕೆ ಮಾಡಬೇಕು? ಆ ಮೂಲಕ ಬಲಹೀನ ಪ್ರಕೃತಿಯ ಜನರಿಗೆ ಮೋಡಿ ಮಾಟದ ಬಗ್ಗೆ ಅನಾವಶ್ಯಕವಾಗಿ ಶ್ರದ್ಧೆ ಹರಿಯುವ ಅಪಾಯವಿದೆ.

ಒಟ್ಟಿನಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಂಡ ಸ್ವಪ್ನದ ಮುಖ್ಯ ಉದ್ದೇಶ ಇದು ಮಾತ್ರವಾಗಿತ್ತು. ಅಂದರೆ, ದುರ್ಜನರು ಬಾವಿಯೊಳಗೆ ಕೆಲವು ವಸ್ತುಗಳನ್ನು ಅಡಗಿಸಿಟ್ಟು ಅದರ ಮೂಲಕ ತಮಗೆ

ಸಮಾನವಾದ ಮನೋಭಾವದ ಜನರಿಗೆ ಮೋಸ ಮಾಡುತ್ತಿದ್ದರು. ಆದರೆ ಅದರ ಬಗ್ಗೆ ಅಲ್ಲಾಹನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿ ಅವರ ತಥಾಕಥಿತ ಮೋಡಿ ಮಾಟವನ್ನು ನಿಷ್ಫಲಗೊಳಿಸಿದನು. ಅವರು ಬಳಸಿದ ವಸ್ತುಗಳನ್ನು ಮಣ್ಣು ಹಾಕಿ ಹೂಳಲಾಯಿತು. ಬಾವಿಯನ್ನು ಮುಚ್ಚಲಾಯಿತು. ಶತ್ರುಗಳು ಮುಗ್ದ ಜನರಿಗೆ ಮೋಸ ಮಾಡುವರೆಂಬ ಭಯ ಸಹ ನಿವಾರಣೆಯಾಯಿತು. ಅಲ್ಲಾಹನ ವಾಗ್ದಾನ, **ಲಾ ಯುಫ್ಲಿಹುಸ್ಸಾಹಿರು ಹೈಸು ಅತಾ** ಒಬ್ಬ ಮೋಡಿ ಮಾಟಗಾರ ಯಾವ ರೀತಿಯಲ್ಲಿಯೂ ಪ್ರವಾದಿಗೆ ಎದುರಾಗಿ ಜಯಶಾಲಿಯಾಗಲಾರ ಎಂಬ ಅಲ್ಲಾಹನ ವಾಗ್ದಾನ ಅತ್ಯಂತ ವೈಭವಶಾಲಿಯಾಗಿ ಈಡೇರಿತು..

ಒಂದು ಪ್ರಶ್ನೆ ಉಳಿಯುತ್ತದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಂತಹ ವೈಭವಶಾಲಿ ಪ್ರವಾದಿ, ಎಲ್ಲಾ ಪ್ರವಾದಿಗಳಿಗಿಂತ ಶ್ರೇಷ್ಠ, ಖಾತಮುನ್ನಬಿಯ್ಯೀನ್ ಆಗಿದ್ದ ಅವರು ಮರೆವು ರೋಗದಿಂದ ಹೇಗೆ ಬಾಧಿತರಾದರು? ಇದು ಅವರ ನುಬುವ್ವತ್ತಿನ ಹೊಣೆಗಾರಿಕೆಗಳನ್ನು ಈಡೇರಿಸಲು ಅಡ್ಡಿಯಾಗಿರಲಿಲ್ಲವೇ? ಎಂಬ ಪ್ರಶ್ನೆಗೆ ಉತ್ತರ ಹೀಗೆ: ಚೆನ್ನಾಗಿ ನೆನಪಿಡಬೇಕಾದುದೇನೆಂದರೆ ಪ್ರತಿಯೊಬ್ಬ ಪ್ರವಾದಿ ಇಬ್ಬಗೆಯ ಸ್ಥಾನ ಹೊಂದಿರುತ್ತಾರೆ. ಅವರು ಅಲ್ಲಾಹನ ನಬಿಯೂ ರಸೂಲೂ ಆಗಿರುವ ಕಾರಣ ಅವರಿಗೆ ಅಲ್ಲಾಹನ ವಚನ ಅವತೀರ್ಣವಾಗುತ್ತವೆ. ಅವರು ಧಾರ್ಮಿಕ ವಿಷಯಗಳಲ್ಲಿ ತನ್ನ ಅನುಯಾಯಿಗಳ ಅಧ್ಯಾಪಕನಾಗಿರುತ್ತಾರೆ. ಅವರು ತನ್ನ ಅನುಯಾಯಿಗಳಿಗೆ ಮಾದರಿ ಆಗಿರುತ್ತಾರೆ. ಆದರೆ ಅವರು ಮನುಷ್ಯರಲ್ಲಿ ಒಬ್ಬರಾಗಿದ್ದಾರೆ. ಅವರು ಮಾನವ ಸಹಜವಾದ ಎಲ್ಲಾ ಆವಶ್ಯಕತೆಗಳಿಗೆ ಮತ್ತು ಅಪಾಯಗಳಿಗೆ ಅಧೀನರಾಗಿರುತ್ತಾರೆ.

ಕೆಲವರಿಗೆ ಹೀಗೆ ಯೋಚನೆ ತಲೆದೋರಬಹುದು. ಅಲ್ಲಾಹನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದ್ದಾನೆ: **ಸನುಖ್ರಿಉಕ ಫಲಾ ತನ್ಸಾ** – ನಾವು ನಿನಗೆ (ಖುರ್‌ಆನನ್ನು) ಕಲಿಸುವೆವು. ನೀನು ಅದನ್ನು ಮರೆತು ಬಿಡಲಾರೆ. (87:7). ಈ ಬಗ್ಗೆ ನೆನಪಿಡಬೇಕಾದುದೇನೆಂದರೆ ಈ ವಾಗ್ದಾನ ಪವಿತ್ರ ಖುರ್‌ಆನ್ ಬಗ್ಗೆ ಮಾತ್ರವಾಗಿದೆ. ದೈನಂದಿನ ಲೌಕಿಕ ವಿಷಯಗಳಿಗೆ, ಧಾರ್ಮಿಕ ಕರ್ಮಗಳ ಬಾಹ್ಯ ರೂಪಗಳಿಗೆ ಈ ವಾಗ್ದಾನ ಅನ್ವಯಿಸುವುದಿಲ್ಲ. ಸಾಮಾನ್ಯವಾಗಿ ತಾತ್ಕಾಲಿಕ ಮರೆವು ಸಂಭವಿಸುವ ಹಾಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹುದೈಬಿಯಾ ಸಂಧಿಯ ನಂತರ ರೋಗಬಾಧೆಯ ಕಾರಣ ಮರೆವು ಸಂಭವಿಸಿತು. ಹಿಂದಿನ ಕಾಲದ ವಿದ್ವಾಂಸರು ಸಹ ಅದು ತಾತ್ಕಾಲಿಕವಾಗಿತ್ತು ಎಂದು ಬರೆದಿದ್ದಾರೆ. ಹದೀಸಿನ ಕೊನೆಗೆ ಹೇಳಿದ ಮಾತು, ಅಲ್ಲಾಹನು ನನಗೆ ಶಿಫಾ ನೀಡಿದನು ಎಂದು ಹೇಳಿದ ಮಾತು ಇದನ್ನೇ ಸೂಚಿಸುತ್ತದೆ.

ಕೊನೆಗೆ, ಈ ಕುರಿತು ಈ ಕಾಲಘಟ್ಟದ ಹಕಮ್ ಮತ್ತು ಅದಲ್ ಆಗಿ ಆಗಮಿಸಿದವರು ಹೇಳಿದ ಮಾತನ್ನು ಉಲ್ಲೇಖಿಸುತ್ತೇನೆ. ಒಬ್ಬ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಜ್ಲಿಸ್‌ನಲ್ಲಿ ಕೇಳಿದನು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವಿಶ್ವಾಸಿಗಳು ಮಾಡಿದ ಮೋಡಿ ಮಾಟದ ಬಗ್ಗೆ ನಿಮ್ಮ ಅಭಿಪ್ರಾಯವೇನು? ಹಝ್ರತ್ ಅಖ್‌ದಸ್ ಅಲೈಹಿಸ್ಸಲಾಮರು ಹೇಳಿದರು: ಮೋಡಿ ಮಾಟ ಶೈತಾನನ ಕಡೆಯಿಂದ ಮಾಡಲಾಗುತ್ತದೆ. ನಬಿಗಳು ಮತ್ತು ರಸೂಲರು ಎಂತಹ ವೈಭವಶಾಲಿಗಳೆಂದರೆ ಅವರ ಮೇಲೆ ಮೋಡಿ ಮಾಟಗಳ ಪ್ರಭಾವ ಉಂಟಾಗುವುದಿಲ್ಲ. ಬದಲಾಗಿ ಅವರನ್ನು ನೋಡಿ ಜಾದೂ ಮಾಡುವ ಶೈತಾನ್ ಓಡಿ ಹೋಗುತ್ತಾನೆ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳಿದ್ದಾನೆ: **ಲಾ ಯುಫ್ಲಿಹುಸ್ಸಾಹಿರು ಹೈಸು ಅತಾ.** ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಮೋಡಿ ಮಾಟ ಜಯಗಳಿಸಿತೆಂದು ಹೇಳುವುದು ಸಂಪೂರ್ಣವಾಗಿ ತಪ್ಪಾಗಿದೆ. ನಾವು ಅದನ್ನು ಎಂದೂ ಅಂಗೀಕರಿಸಲಾರೆವು. ಕಣ್ಣು ಮುಚ್ಚಿಕೊಂಡು ಬುಖಾರಿಯನ್ನೂ ಮುಸ್ಲಿಮನ್ನೂ ನಂಬುವುದು ನಮ್ಮ ನಿಲುವಿಗೆ ವಿರುದ್ಧವಾಗಿದೆ. ಅಂತಹ ವೈಭವಶಾಲಿ ಪ್ರವಾದಿಗೆ ಮೋಡಿ ಮಾಟ ಪ್ರಭಾವ ಬೀರಿತು ಎಂದು ಹೇಳುವುದನ್ನು ಬುದ್ಧಿ ಸಹ ಅಂಗೀಕರಿಸುವುದಿಲ್ಲ. ಮೋಡಿ ಮಾಟದ ಕಾರಣದಿಂದ ಮರೆವು ಸಂಭವಿಸಿತು, ಹಾಗಾಯಿತು, ಹೀಗಾಯಿತು ಎಂದು ಹೇಳುವುದು ಯಾವ ರೀತಿಯಲ್ಲಿಯೂ ಸರಿಯಾಗಲು ಸಾಧ್ಯವಿಲ್ಲ. ಶೈತಾನನ ಸ್ಪರ್ಶದಿಂದ ಮುಕ್ತರು ಎಂದು ಯಾವ ಪ್ರವಾದಿಯ ಬಗ್ಗೆ ಎಲ್ಲಾ ಪ್ರವಾದಿಗಳು ಹೇಳುತ್ತಾರೋ ಆ ನಿಷ್ಕಳಂಕ ಪ್ರವಾದಿಯ ಬಗ್ಗೆ ಇಂತಹ ಮಾತು ಹೇಳಲು ಈ ಜನರಿಗೆ ಸಂಭವಿಸಿರುವುದಾದರೂ ಏನು ಎಂದು ತಿಳಿಯುವುದಿಲ್ಲ.

ಅಲ್‌ಹಮ್‌ದುಲಿಲ್ಲಾಹ್, ನಾವು ಈ ಕಾಲಘಟ್ಟದ ಇಮಾಮರನ್ನು ನಂಬಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮಹತ್ವವನ್ನು ಮನವರಿಕೆ ಮಾಡಿದವರೂ ಗುರುತಿಸಿದವರೂ ಆಗಿದ್ದೇವೆ.

*****


***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh London, UK. On 08-03-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon